

ರಾಯಚೂರಿನಲ್ಲಿ ಡಿಸೆಂಬರ್ 2ರಿಂದ ಮೂರು ದಿನಗಳ ಕಾಲ ನಡೆಯಲಿರುವ 82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ 'ನಾಡೋಜ' ಬರಗೂರು ರಾಮಚಂದ್ರಪ್ಪ ಅವರು ಆಯ್ಕೆಯಾಗಿರುವುದು ನಾಡಿನೆಲ್ಲೆಡೆ ಸಾಹಿತ್ಯಾಸಕ್ತರ ಕುತೂಹಲ ಮತ್ತು ಸಂಭ್ರಮವನ್ನು ಉಕ್ಕೇರಿಸಿದೆ. ತುಮಕೂರು ಜಿಲ್ಲೆಯವರಾದ ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯ ಪರಿಷತ್ತಿನ ಆಯ್ಕೆ ಸಭೆಯಲ್ಲಿ ಸಮ್ಮೇಳನದ ಅಧ್ಯಕ್ಷರಾಗಿ ಸರ್ವಾನುಮತದಿಂದ (ಚುನಾವಣೆ ಇಲ್ಲದೆ) ಆಯ್ಕೆ ಆಗಿರುವುದು ವಿಶೇಷ.
ವಿದ್ಯಾರ್ಥಿಯಾಗಿದ್ದಾಗಲೇ ದರ್ಜಿಯಾಗಿ ಕೆಲಸ ಮಾಡಿದ್ದ ಬರಗೂರು, ಸದಾ ಸಾಮಾಜಿಕ ಸಮಾನತೆಯ ಖಾಯಂ ವಕೀಲರು. ಒಂದು ಕಾಲದಲ್ಲಿ ಅತ್ಯುತ್ತಮ ಫೋಟೋ ಕ್ಲಿಕ್ಕಿಸಿದ್ದಕ್ಕಾಗಿ ಪತ್ರಿಕೆಯೊಂದರಿಂದ ಬಹುಮಾನವನ್ನೂ ಗಳಿಸಿದ್ದ ಅವರು, ಕನ್ನಡ ಸಾಹಿತ್ಯ ಅಕಾಡೆಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ರಾಜ್ಯ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ – ಇವುಗಳ ಅಧ್ಯಕ್ಷ ಹುದ್ದೆಗಳನ್ನು ಅತ್ಯಂತ ಕ್ರಿಯಾಶೀಲತೆಯಿಂದ ನಿಭಾಯಿಸಿದವರು. ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕರಾಗಿ ಕಳೆದ ಮೂರು ದಶಕಗಳಲ್ಲಿ ಕನ್ನಡದ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕವನ್ನು ಬಹಳವಾಗಿ ಪ್ರಭಾವಿಸಿರುವ ಬರಗೂರು, ಸಾವಿರಾರು ಯುವ ಸಾಹಿತಿಗಳನ್ನು ಪ್ರಭಾವಿಸಿದವರು.
ಪ್ರಾಧ್ಯಾಪಕ, ಪ್ರಖರ ವಾಗ್ಮಿ, ಸಂಘಟಕ, ಸಂಸ್ಕೃತಿ ಚಿಂತಕ, ಕಥೆಗಾರ, ಕವಿ, ಅಂಕಣಕಾರ, ಸಿನಿಮಾ ನಿರ್ದೇಶಕ– ಹೀಗೆ ಬಹುಮುಖಿ ಸಾಮರ್ಥ್ಯವನ್ನು ಹೊಂದಿರುವವರು ಬರಗೂರು ಮೇಷ್ಟ್ರು. ಸರಳ ಜೀವನ, ಸದಾ ಹಸನ್ಮುಖ, ಖಚಿತ ವಾದಮಂಡನೆ, ಕೆಲಸದಲ್ಲಿ ಶಿಸ್ತು, ನಿರಂತರ ದುಡಿಮೆ– ಹೀಗೆ ತಮ್ಮ ಹಲವು ಗುಣಗಳ ಮೂಲಕ ನಾಡಿನಾದ್ಯಂತ ಶಿಷ್ಯಕೋಟಿಯನ್ನು ಹೊಂದಿರುವ ಬರಗೂರು, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ 'ಸುಧಾ' ಜತೆಗೆ ಹಂಚಿಕೊಂಡ ಅಭಿಪ್ರಾಯಗಳ ಆಯ್ದ ಭಾಗ ಇಲ್ಲಿದೆ.

■ **ಅಲೇಖ**

ಚಿತ್ರ: ವಿಶ್ವನಾಥ ಸುವರ್ಣ

# ...ಯ ಬಿಕ್ಕಟ್ಟನ್ನು ಎದುರಿಸುತ್ತಿದೆ..

ಊಟದ ಸ್ಟಾಲ್‌ಗಳೂ ಇರಲಿ. ಪ್ರತಿನಿಧಿಗಳಿಗೆ ಮಾತ್ರ ಸಾಹಿತ್ಯ ಪರಿಷತ್ತೇ ಊಟ ವಸತಿಯ ವ್ಯವಸ್ಥೆ ಮಾಡಿದರೆ ಸಾಕು. ಸಮ್ಮೇಳನದ ಮೂಲಕ ದೊಡ್ಡದೊಂದು ಗುಂಪಿಗೆ ಅಭಿರುಚಿಯ ನಿರ್ಮಾಣ ಮಾಡುವುದು ಮುಖ್ಯವಾಗಬೇಕು.

★ ಸಮ್ಮೇಳನದಲ್ಲಿ ಸ್ವೀಕರಿಸುವ ನಿರ್ಣಯಗಳ ಗತಿಯೇನು? ಈ ಹಿಂದೆ ಅಂಗೀಕರಿಸಿದ ನಿರ್ಣಯಗಳೆಲ್ಲ ಹಾಗೆಯೇ ಉಳಿದಿವೆ. ಇತ್ತೀಚೆಗೆ ಕೇವಲ ಒಂದೋ ಎರಡೋ ನಿರ್ಣಯಗಳನ್ನು ಸ್ವೀಕರಿಸುವ ಪರಿಪಾಠ ಬೆಳೆದಿದೆಯಲ್ಲ?

ಕನ್ನಡ ಸಾಹಿತ್ಯ ಪರಿಷತ್ತು ನಿರ್ಣಯಗಳ ಬೆನ್ನುಬೀಳಬೇಕು. ನಿರ್ಣಯಗಳು ಜಾರಿಗೆ ಬರುವಂತೆ ಮಾಡುವುದು ಪರಿಷತ್ತಿನ ಕೆಲಸ. ನನ್ನನ್ನು ಈ ವರ್ಷ ಪೂರ್ತಿಯಾಗಿ ಬಳಸಿಕೊಳ್ಳಿ ಎಂದು ಪರಿಷತ್ತಿನ ಪದಾಧಿಕಾರಿಗಳಿಗೆ ಹೇಳಿದ್ದೇನೆ. ನಾನೂ ಅವರನ್ನು ಕನ್ನಡದ ಕೆಲಸಗಳಿಗೆ ಬಳಸಿಕೊಳ್ಳಬೇಕು. ಪರಿಷತ್ತಿನ ನಿಯಮಗಳ ಪ್ರಕಾರ, ಸಮ್ಮೇಳನದ ಅಧ್ಯಕ್ಷರು ಮುಂದಿನ ಒಂದು ವರ್ಷದ ಕಾಲ ಪರಿಷತ್ತಿನ ಕಾರ್ಯಕಾರಿ ಸಮಿತಿಯ ವಿಶೇಷ ಆಹ್ವಾನಿತರಾಗುತ್ತಾರೆ. ಹಾಗಾಗಿ ನಾನೂ ಪರಿಷತ್ತಿನ ಜತೆ ಸೇರಿ ಕೆಲಸ ಮಾಡಬಹುದು.

★ ರಾಜ್ಯದಲ್ಲಿ ಕನ್ನಡ ಮಾಧ್ಯಮ ಜಾರಿಗೆ ಸಂವಿಧಾನ ತಿದ್ದುಪಡಿಯೊಂದೇ ದಾರಿ ಎನ್ನುವ ಮಾತುಗಳನ್ನು ಆಳುವವರ ಸಹಿತ ಎಲ್ಲರೂ ಆಡುತ್ತಿದ್ದಾರೆ. ಆದರೆ ಆ ನಿಟ್ಟಿನಲ್ಲಿ ಯಾವ ಕೆಲಸವೂ ಆಗುತ್ತಿಲ್ಲ. ಕನ್ನಡದ ಬಗ್ಗೆ ಮಾತನಾಡುವವರೆಲ್ಲ ಇಂಗ್ಲಿಷ್ ಶಾಲೆಗಳ ಮೊರೆ ಹೋಗಿದ್ದಾರೆ?

ನಮ್ಮ ಬದುಕೇ ವಿರೋಧಾಭಾಸದಿಂದ ಕೂಡಿದೆ. ಕನ್ನಡ ಮಾಧ್ಯಮದ ಶಿಕ್ಷಣದ ಆಶಯವನ್ನು ಜಾರಿಗೆ ತರಲಾಗದಂತಹ ವಾಸ್ತವ ಪರಿಸ್ಥಿತಿ ಇದೆ. ಮಾತೃಭಾಷೆಯಲ್ಲೇ ಶಿಕ್ಷಣ ಕೊಡಿ ಎಂಬ ಸುಪ್ರೀಂಕೋರ್ಟ್ ತೀರ್ಪು ನಮಗೆ ಅಡ್ಡಿಯಾಗಿದೆ. ನಮಗೆ ಎಂತಹ ಶಿಕ್ಷಣ ಬೇಕು ಎನ್ನುವ ಕುರಿತು ಹಿಂದೆ ವಿಧಾನಮಂಡಲದಲ್ಲೇ ನಿರ್ಣಯ ಆಗಿದೆ. ಆ ನಿರ್ಣಯವನ್ನೇ ಇಟ್ಟುಕೊಂಡು ಸಾಂವಿಧಾನಿಕ ಬಿಕ್ಕಟ್ಟು ನಿರ್ಮಿಸಬಹುದೆ ಎನ್ನುವುದನ್ನು ಆಲೋಚಿಸಬೇಕು. ಭಾಷಾ ಮಾಧ್ಯಮದ ವಿಷಯದಲ್ಲಿ ಕರ್ನಾಟಕದ ಜತೆಗೆ ತಮಿಳುನಾಡು ಮತ್ತು ಆಂಧ್ರಪ್ರದೇಶಗಳೂ ಸುಪ್ರೀಂಕೋರ್ಟಿಗೆ ಅರ್ಜಿ ಸಲ್ಲಿಸಿದ್ದವು. ಆದರೆ ಆಂಧ್ರಪ್ರದೇಶ ರಾಜ್ಯದ ವಿಭಜನೆಯ ಗೊಂದಲದಲ್ಲಿ ಸಿಲುಕಿ ಸುಪ್ರೀಂಕೋರ್ಟಿನಲ್ಲಿ ತನ್ನ ವಾದ ಮಂಡಿಸಲೇ ಇಲ್ಲ. ತಮಿಳುನಾಡು ಅರ್ಜಿಯನ್ನು ಹಿಂತೆಗೆದುಕೊಂಡಿತು. ಈ ಹೋರಾಟದಲ್ಲಿ ನಾವು